ಆ) ಇಲ್ಲ, ಆದರೆ ಕುಮ್ಕಿ ಜಮೀನು ಸಕ್ರಮಗೊಳಿಸುವ ಯೋಜನೆಯಡಿಯಲ್ಲಿ ಮಂಜೂರಾತಿಗೆ ಲಭ್ಯವಿರುವುದಿಲ್ಲ.

ಆ) ಕುಮ್ಕಿ ಹಕ್ಕುಗಳನ್ನು ರದ್ದು ಪಡಿಸಿರುವುದಿಲ್ಲ; ಆದುದರಿಂದ ರೈತರಿಗೆ ತೊಂದರೆಯಾಗಿದೆಯೆಂದು ಹೇಳಲಾಗುವುದಿಲ್ಲ.

ಇ) ಇಲ್ಲ.

ವಿಷಯ : ರಾಜ್ಯದ ಜಮೀನುಗಳನ್ನು ಅಳತೆ ಮಾಡುವ ಬಗ್ಗೆ.

Q: 665

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ರಾಜ್ಯದಲ್ಲಿ ಯಾವಾಗ ಜಮೀನುಗಳನ್ನು ಅಳತೆ ಮಾಡಲಾಗಿತ್ತು?

ಆ) ಜಮೀನುಗಳನ್ನು ಪುನಃ ಅಳತೆ ಮಾಡದೇ ಇರುವುದರಿಂದ ಆಗಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಇ) ಬಂದಿದ್ದಲ್ಲಿ, ಯಾವಾಗ ಪುನಃ ಅಳತೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಆ) ರಾಜ್ಯದಲ್ಲಿ ಎಲ್ಲಾ ಭೂಪ್ರದೇಶಗಳನ್ನು ಆಯಾ ರಾಜ್ಯದ ಎದುರಿಗೆ ನಮೂದಿಸಿರುವ ಇಸವಿಯಲ್ಲಿ ಸರ್ವೆ ಮಾಡಿರುತ್ತೆ :

ಪ್ರದೇಶ	ಇಂದ	ವರೆಗೆ
1. ಹಳೇ ಮೈಸೂರು ಪ್ರದೇಶ	1863	1890
2. ಬಾಂಬೆ ಪ್ರದೇಶ	1840	1863
3. ಮದರಾಸು ಪ್ರದೇಶ	1893	1904
4. ಹೈದರಾಬಾದ್ ಪ್ರದೇಶ	1875	1888
5. ಕೊಡಗು (ಕೂರ್ಗ್) ಪ್ರದೇಶ	1806	1816

ಆ) ಹೌದು.

ಇ) ಹಣದ ಲಭ್ಯತೆ ಅನುಸರಿಸಿ, ಪುನರ್-ಸರ್ವೆ ಕಾರ್ಯವನ್ನು ಹಂತ-ಹಂತವಾಗಿ ಕೈಗೊಳ್ಳಲು ಪರಿಶೀಲಿಸಲಾಗುವುದು.

ವಿಷಯ : ಲಾಲ್‌ಬಾಗ್‌ನಲ್ಲಿ ರಾಕ್ ಗಾರ್ಡನ್ ನಿರ್ಮಾಣ.

Q: 666

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಲಾಲ್‌ಬಾಗ್ ಉದ್ಯಾನವನದಲ್ಲಿ ಒಂದು ರಾಕ್ ಗಾರ್ಡನ್ ನಿರ್ಮಿಸಲು ಯೋಜನೆ ಸಿದ್ಧ ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಯೋಜನೆಯು ಕಾರ್ಯರೂಪಕ್ಕೆ ಬರದೇ ಇರಲು ಕಾರಣವೇನು? ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಹೌದು.

ಆ) ರಾಕ್‌ಗಾರ್ಡನ್ ಯೋಜನೆಯನ್ನು ಪ್ರಸ್ತುತ ಸಾಲಿನಲ್ಲಿ ಅನುಷ್ಠಾನಗೊಳಿಸಲು ಯೋಜನೆಯಡಿಯಲ್ಲಿ 9 ಲಕ್ಷ ರೂ.ಗಳನ್ನು ನಿಗದಿಪಡಿಸಿದ್ದು ಈಗಾಗಲೇ 4.60 ಲಕ್ಷ ರೂ.ಗಳನ್ನು ಖರ್ಚು ಮಾಡಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿದೆ. ಬಹುಪಾಲು ಕೆಲಸ ಕಾರ್ಯಗಳು ಮುಗಿದಿದ್ದು ಮುಖ್ಯವಾಗಿ ಸುವರ್ಣ ಮಹೋತ್ಸವ ಭವನದ ಎದುರು ಇರುವ ಸುಮಾರು 60 ಅಡಿ ಉದ್ದದ ಇಳಿಜಾರು ಬಂಡೆ ಪ್ರದೇಶದಲ್ಲಿ ರಾಕರಿಗಳನ್ನು ಕಲ್ಲುಗಳಿಂದ ನಿರ್ಮಿಸಿ ಹಬ್ಬುವ ಗಿಡಗಳನ್ನು ನೆಟ್ಟು ಅಂದಗೊಳಿಸಿದೆ. ಹಾಗೂ ಕಾಲುದಾರಿಗಳು ಮತ್ತು ಅಲಂಕಾರಿಕ ಕಮಾನುಗಳನ್ನು ನಿರ್ಮಿಸಲಾಗಿದೆ. ಉಳಿದ ಕೆಲಸಗಳು ಭರದಿಂದ ಸಾಗುತ್ತಿದೆ. ಮುಖ್ಯವಾಗಿ ಕಲ್ಲುಬೆಂಚು ನಿರ್ಮಾಣ, ದೀಪದ ವ್ಯವಸ್ಥೆ, ಕೊಳದ ನೀರಿನಿಂದ ದಂಡೆಯ ಮೇಲೆ ನೀರಿನ ಫಾಲ್ಸ್‌ನ್ನು ಅಭಿವೃದ್ಧಿ ಪಡಿಸಿ ಯೋಜನೆಯನ್ನು 1993ರ ಮಾರ್ಚ್ ಕೊನೆಯಲ್ಲಿ ಪೂರ್ಣಗೊಳಿಸಲಾಗುವುದು.

ವಿಷಯ : ಅಕ್ರಮ ಸರ್ಕಾರಿ ಜಮೀನುಗಳನ್ನು ಖಾಯಂಗೊಳಿಸುವ ಬಗ್ಗೆ

Q: 466

ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಕ್ರಮ ಸಾಗುವಳಿ ಮಾಡುತ್ತಿರುವ ಎಷ್ಟು ಜನರಿಗೆ , ಎಷ್ಟು ಜಮೀನನ್ನು ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಕ್ರಮಗೊಳಿಸಿದೆ?

ಆ) ಎಷ್ಟು ಜನಕ್ಕೆ ಹಕ್ಕು ಪತ್ರ ವಿತರಣೆ ಆಗಿದೆ?

ಶ್ರೀ ಎಂ. ರಾಜಶೇಖರಮೂರ್ತಿ - ಕಂದಾಯ ಸಚಿವರು

ಅ) 3,465 ಜನರಿಗೆ 3,837 ಎಕರೆ ಜಮೀನನ್ನು ಮಂಜೂರು ಮಾಡಿದೆ. ಸಕ್ರಮೀಕರಣ ಯೋಜನೆಯು ಜಾರಿಗೆ ಬಂದಾಗಿನಿಂದ.

ಆ) ಇದುವರೆವಿಗೂ 18 ಜಿಲ್ಲೆಗಳಲ್ಲಿ 14,722 ಸಾಗುವಳಿ ಚೀಟಿಗಳನ್ನು ವಿತರಿಸಲಾಗಿದೆ.

ವಿಷಯಃ ರಾಜ್ಯದಲ್ಲಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಲ್ಲಿ ಹಂಗಾಮಿ ನೌಕರರ ಸಂಖ್ಯೆ.